# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 292

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 21.12.2022

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರದಿಂದ ಮಾಜಿ ಸೈನಿಕರಿಗೆ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳೇನು; (ಆದೇಶದ ಪ್ರತಿ ನೀಡುವುದು) | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 5(1)(ಎ) ರಲ್ಲಿ ಗ್ರಾಮದಲ್ಲಿ ವಿಲೇ ಮಾಡಲು ಲಭ್ಯವಿರುವ ಜಮೀನಿನ ಪೈಕಿ ಶೇಕಡ 10 ರಷ್ಟು ಜಮೀನನ್ನು ಸೈನಿಕ/ಮಾಜಿ ಸೈನಿಕರಿಗೆ ಮೀಸಲಿಡಲು ಅವಕಾಶ ಕಲ್ಪಿಸಲಾಗಿದೆ.<br><br>ಭೂ ಲಭ್ಯತಾ ಪಟ್ಟಿಯನ್ವಯ ಲಭ್ಯವಿರುವ ಸರ್ಕಾರಿ ಜಮೀನಿನಲ್ಲಿ ಸೈನಿಕ/ಮಾಜಿ ಸೈನಿಕರಿಗೆ ಕೃಷಿ ಉದ್ದೇಶಕ್ಕಾಗಿ ಸದ್ಯದ ಹಿಡುವಳಿಗಳನ್ನು ಒಳಗೊಂಡಂತೆ ಎರಡು ಹೆಕ್ಟೇರ್ ಗಳಿಗೆ ಮೀರದ ಖುಷ್ಕಿ ಭೂಮಿ ಮತ್ತು ಒಂದು ಹೆಕ್ಟೇರ್ ಗೆ ಮೀರದ ತರಿ ಭೂಮಿ ಅಥವಾ ಬಾಗಾಯ್ತು ಭೂಮಿಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಯಾವುದೇ ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ 2400 ಚದರ ಅಡಿ ಅಳತೆಯ ನಿವೇಶನವನ್ನು ಅಥವಾ ನಗರ ಪ್ರದೇಶಗಳಲ್ಲಿ 1200 ಚದರ ಅಡಿ ಅಳತೆಯ ನಿವೇಶನವನ್ನು ಮಂಜೂರು ಮಾಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸರ್ಕಾರಿ ಆದೇಶದ ಪ್ರತಿಯನ್ನು ಲಗತ್ತಿಸಿದೆ. |
| (ಆ) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಮಾಜಿ ಸೈನಿಕರು ಭೂಮಿ ಮಂಜೂರು ಕೋರಿ ಅರ್ಜಿ ಸಲ್ಲಿಸಿದ್ದಾರೆ; ಈ ಪೈಕಿ ಎಷ್ಟು ಜನರಿಗೆ ಭೂಮಿ ಮಂಜೂರು ಮಾಡಲಾಗಿದೆ; (ತಾಲೂಕುವಾರು ಮಾಹಿತಿ ನೀಡುವುದು) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮಾಜಿ ಸೈನಿಕರು ಜಮೀನು ಮಂಜೂರು ಕೋರಿ ಸಲ್ಲಿಸಿರುವ ಹಾಗೂ ಮಂಜೂರಾದ ಪ್ರಕರಣಗಳ ತಾಲ್ಲೂಕುವಾರು ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಇ) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮಾಜಿ ಸೈನಿಕರಿಗೆ ಜಮೀನು ಮಂಜೂರು ಮಾಡಲು 'ಭೂ ಲಭ್ಯತಾ | ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಭೂಲಭ್ಯತಾ ಪಟ್ಟಿಯಂತೆ ಯಾವುದೇ ಜಮೀನು ಲಭ್ಯವಿರುವುದಿಲ್ಲ. |

| | | |
|---|---|---|
| | ಪಟ್ಟಿಯಂತೆ' ಲಭ್ಯವಿರುವ ಜಮೀನು ಎಷ್ಟು; (ತಾಲೂಕುವಾರು ಮಾಹಿತಿ ನೀಡುವುದು) | ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಭೂ ಲಭ್ಯತಾ ಪಟ್ಟಿಯಂತೆ 98-21 ಎಕರೆ ಹಾಗೂ ಹಾಸನ ತಾಲ್ಲೂಕಿನಲ್ಲಿ 18-32 ಎಕರೆ ಜಮೀನು ಮಾಜಿ ಸೈನಿಕರಿಗೆ ಜಮೀನು ಮಂಜೂರು ಮಾಡಲು ಲಭ್ಯವಿರುತ್ತದೆ. |
| (ಈ) | ಸದರಿ ಜಿಲ್ಲೆಗಳಲ್ಲಿ ಭೂಮಿ ಮಂಜೂರು ಮಾಡಲು ಬಾಕಿ ಉಳಿದಿರುವ ಅರ್ಜಿಗಳೆಷ್ಟು; ಎಷ್ಟು ವರ್ಷಗಳಿಂದ ಬಾಕಿ ಉಳಿದಿದೆ ಇದಕ್ಕೆ ಕಾರಣಗಳೇನು; (ತಾಲೂಕುವಾರು ವಿವರ ನೀಡುವುದು) | ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| (ಉ) | ಮಾಜಿ ಸೈನಿಕರಿಗೆ ಜಮೀನು ಮಂಜೂರು ಮಾಡಿ, ಹಿಂಪಡೆದಿರುವ ಪ್ರಕರಣಗಳಿವೆಯೇ? (ಇದ್ದಲ್ಲಿ, ಜಿಲ್ಲಾವಾರು ಮಾಹಿತಿ ನೀಡುವುದು) | ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮಾಜಿ ಸೈನಿಕರಿಗೆ ಜಮೀನು ಮಾಡಿ, ಹಿಂಪಡೆದಿರುವ ಪ್ರಕರಣಗಳಿರುವುದಿಲ್ಲ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬೆಳವಾಡಿ ಗ್ರಾಮದ ಸ.ನಂ. 376 ರಲ್ಲಿ ಈ ಹಿಂದೆ 50 ಜನ ಮಾಜಿ ಸೈನಿಕರಿಗೆ ಮಂಜೂರು ಮಾಡಲಾಗಿದ್ದ 125-00 ಎಕರೆ ಜಮೀನಿನಲ್ಲಿ ಯಾರೂ ವ್ಯವಸಾಯ ಮಾಡದೆ ಇದ್ದ ಕಾರಣ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 25ರ ಪ್ರಕಾರ ರದ್ದುಪಡಿಸಲಾಗಿರುತ್ತದೆ. |

(ಕಡತ ಸಂಖ್ಯೆ:ಕಂಇ 44 ಎಲ್ ಜಿವೈ 2022)

(ಆರ್.ಅಶೋಕ)
ಕಂದಾಯ ಸಚಿವರು

GOVERNMENT OF KARNATAKA

No: RD 26 LGP 2021

Karnataka Government Secretariat,
M.S. Building,
Bengaluru, dated: 27-10-2021.

## NOTIFICATION

The draft of the following rules further to amend the Karnataka Land Grant Rules, 1969, was published which the Government of Karnataka, proposes to make in exercise of the powers conferred under section 197 of the Karnataka Land Revenue Act, 1964 (Karnataka Act 12 of 1964) in Notification No. RD 26 LGP 2021; dated: 23.09.2021 published in part-IVA of the Karnataka Gazette; dated: 23.09.2021 inviting objections or suggestions from all persons likely to be affected thereby within fifteen days from the date of its publication in the official Gazette.

Whereas the said Gazette was made available to the public on 23.09.2021. And whereas two objections were received, within the period specified above and the said objections have been endorsed with suitable reasons.

Now, therefore, in exercise of the powers conferred by sub-section (1) of section 197 of the Karnataka Land Revenue Act, 1964 (Karnataka Act 12 of 1964) the Government of Karnataka hereby makes the following rules to amend the Karnataka Land Grant Rules, 1969, namely:-

## RULES

1. **Title and commencement.**-(1) These rules may be called the Karnataka Land Grant (Amendment) Rules, 2021.

   (2) They shall come into force from the date of their final publication in the Official Gazette.

2. **Amendment of Rule 8.**- In Rule 8 of the Karnataka Land Grant Rules, 1969, in sub-rule (8),-

   (i) for the second proviso, the following shall be substituted, namely:-
   "Provided further that, if the land is not available for grant in the native taluk as per his service register, then such applications shall be transferred to the other taluk of the concerned district".

....2)

(ii) after the second proviso, as so substituted, the following shall be inserted, namely:-

"Provided also that, where no Government land is available to be granted to soldier and ex-servicemen as per the list prepared and notified every year under Rule 3, a site measuring 2400 square feet in rural area or a site measuring 1200 square feet in urban area shall be allotted in his/her native taluk and if not available in the native taluk, then in any other taluk of the concerned district at free of cost under any existing housing scheme of the State Government or a special scheme that the State Government may form in this regard".

However, no such sites will be allotted in the areas if the native taluk falls within the Bengaluru Urban District and a 1200 square feet site or 2400 square feet site as per the above proviso will be allotted in any of the taluk of the neighbouring districts.

By Order and in the name of the
Governor of Karnataka

**(C. BALARAM)**
Under Secretary to Government,
Revenue Department (Land Grants-1).

The Compiler, Karnataka Gazette, Bangalore with a request to publish the above Notification in the extraordinary Gazette and to supply 100 copies to Revenue Department, Land Grant Section-1, Room No. 537, 5th Floor M.S. Building Bengaluru.

**To:-**

1. The Accountant General, Karnataka, Bengaluru.
2. Secretary to Government, Department of Parliamentary Affairs & Legislation.
3. All the Regional Commissioners.
4. All the Deputy Commissioners.
5. All the Assistant Commissioners/All the Tahasildars – (Through Deputy Commissioners).
6. Director, Directorate of Sanik Welfare and Resettlement, No.58, Field Marshal K.M. Karyappa Road, Bengaluru-560 025.
7. Land Grants-1, 2 & 3 Sections, Revenue Department.
8. Section Guard File.
9. Spare Copies.

....3)

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 292ರ ಅನುಬಂಧ-1

### ಮಂಡ್ಯ ಜಿಲ್ಲೆ:-

| ಕ್ರಮ ಸಂಖ್ಯೆ | ತಾಲ್ಲೂಕು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಮಂಜೂರಾದ ಪ್ರಕರಣಗಳ ಸಂಖ್ಯೆ |
|---|---|---|---|
| 1. | ಮಂಡ್ಯ | 44 | 0 |
| 2. | ಮದ್ದೂರು | 123 | 0 |
| 3. | ಮಳವಳ್ಳಿ | 71 | 0 |
| 4. | ಪಾಂಡವಪುರ | 29 | 0 |
| 5. | ಶ್ರೀರಂಗಪಟ್ಟಣ | 56 | 0 |
| 6. | ಕೆ.ಆರ್.ಪೇಟೆ | 24 | 0 |
| 7. | ನಾಗಮಂಗಲ | 103 | 0 |
| | **ಒಟ್ಟು** | **450** | **0** |

### ಮೈಸೂರು ಜಿಲ್ಲೆ:-

| ಕ್ರಮ ಸಂಖ್ಯೆ | ತಾಲ್ಲೂಕು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಮಂಜೂರಾದ ಪ್ರಕರಣಗಳ ಸಂಖ್ಯೆ |
|---|---|---|---|
| 1. | ಮೈಸೂರು | 119 | 0 |
| 2. | ನಂಜನಗೂಡು | 28 | 0 |
| 3. | ತಿ.ನರಸೀಪುರ | 77 | 0 |
| 4. | ಹುಣಸೂರು | 568 | 295 |
| 5. | ಕೆ.ಆರ್.ನಗರ ಸಾಲಿಗ್ರಾಮ | 289 | 0 |
| 6. | ಪಿರಿಯಾಪಟ್ಟಣ | 136 | 0 |
| 7. | ಹೆಚ್ .ಡಿ.ಕೋಟೆ ಸರಗೂರು | 85 | 47 |
| | **ಒಟ್ಟು** | **1302** | **342** |

### ಹಾಸನ ಜಿಲ್ಲೆ

| ಕ್ರಮ ಸಂಖ್ಯೆ | ತಾಲ್ಲೂಕು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಮಂಜೂರಾದ ಪ್ರಕರಣಗಳ ಸಂಖ್ಯೆ |
|---|---|---|---|
| 1. | ಅರಕಲಗೂಡು | 76 | 06 |
| 2. | ಆಲೂರು | 44 | 0 |
| 3. | ಬೇಲೂರು | 163 | 20 |
| 4. | ಸಕಲೇಶಪುರ | 915 | 47 |
| 5. | ಹಾಸನ | 202 | 1 |
| 6. | ಅರಸೀಕೆರೆ | 179 | 1 |
| 7. | ಹೊಳೆನರಸೀಪುರ | 130 | 7 |
| 8. | ಚನ್ನರಾಯಪಟ್ಟಣ | 83 | 0 |
| | **ಒಟ್ಟು** | **1792** | **82** |

### ಚಾಮರಾಜನಗರ ಜಿಲ್ಲೆ

| ಕ್ರಮ ಸಂಖ್ಯೆ | ತಾಲ್ಲೂಕು | ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಮಂಜೂರಾದ ಪ್ರಕರಣಗಳ ಸಂಖ್ಯೆ |
|---|---|---|---|
| 1. | ಚಾಮರಾಜನಗರ | 21 | 0 |
| 2. | ಕೊಳ್ಳೇಗಾಲ | 21 | 0 |
| 3. | ಹನೂರು | 31 | 1 |
| 4. | ಯಳಂದೂರು | 0 | 0 |
| 5. | ಗುಂಡ್ಲುಪೇಟೆ | 27 | 0 |
| | **ಒಟ್ಟು** | **100** | **1** |

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 292ರ ಅನುಬಂಧ-2

**ಮಂಡ್ಯ ಜಿಲ್ಲೆ:-** ಮಂಡ್ಯ ಜಿಲ್ಲೆಯಲ್ಲಿ ಮಾಜಿ ಸೈನಿಕರಿಗೆ ಜಮೀನು ಮಂಜೂರು ಮಾಡಲು ಒಟ್ಟು 450 ಅರ್ಜಿಗಳು ಬಾಕಿ ಇರುತ್ತವೆ. ಭೂಲಭ್ಯತಾ ಪಟ್ಟಿಯಂತೆ ಮಾಜಿ ಸೈನಿಕರಿಗೆ ಮಂಜೂರು ಮಾಡಲು ಯಾವುದೇ ಜಮೀನು ಲಭ್ಯವಿಲ್ಲದ ಕಾರಣ ಅರ್ಜಿಗಳು ಬಾಕಿಯಿರುತ್ತವೆ.

**ಮೈಸೂರು ಜಿಲ್ಲೆ:-** ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಮಾತ್ರ ಎರಡು ಅರ್ಜಿಗಳು ವಿಲೇವಾರಿ ಬಾಕಿ ಇರುತ್ತವೆ.

**ಹಾಸನ ಜಿಲ್ಲೆ:-**

| ಕ್ರಮ ಸಂಖ್ಯೆ | ತಾಲ್ಲೂಕು | ಮಂಜೂರು ಮಾಡಲು ಬಾಕಿ ಇರುವ ಅರ್ಜಿಗಳ ವಿವರ |
|---|---|---|
| 1. | ಅರಕಲಗೂಡು | ಒಟ್ಟು 76 ಅರ್ಜಿಗಳು ಬಾಕಿಯಿದ್ದು, ನಮೂನೆ 53 ರಲ್ಲಿ ಅರ್ಜಿ ಸಲ್ಲಿಸಿ ಒತ್ತುವರಿಯಾಗಿದ್ದು, ಖುಲ್ಲಾ ಇರುವುದಿಲ್ಲ |
| 2. | ಆಲೂರು | ಒಟ್ಟು 18 ಅರ್ಜಿಗಳು ಬಾಕಿಯಿದ್ದು, 2 ವರ್ಷಗಳಿಂದ ಬಾಕಿಯಿದೆ. ಆಲೂರು ತಾಲ್ಲೂಕಿನಲ್ಲಿ ಮಾಜಿ ಸೈನಿಕರಿಗೆ ಮಂಜೂರು ಮಾಡಲು ಜಮೀನು ಕಾಯ್ದಿರಿಸಿರುವುದಿಲ್ಲ. ತಾಲ್ಲೂಕು ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನಿಗೆ ಈಗಾಗಲೇ ರೈತರು ನಮೂನೆ 50, 53 ಮತ್ತು 57 ರಲ್ಲಿ ಅರ್ಜಿ ಸಲ್ಲಿಸಿ ಅನಧಿಕೃತವಾಗಿ ವ್ಯವಸಾಯ ಮಾಡುತ್ತಿರುತ್ತಾರೆ. ಖುಲ್ಲಾ ಜಮೀನು ಇರುವುದಿಲ್ಲ. |
| 3. | ಬೇಲೂರು | 143 ಅರ್ಜಿಗಳು ಬಾಕಿಯಿದ್ದು, ಸರ್ಕಾರಿ ಭೂಮಿ ಲಭ್ಯವಿರುವುದಿಲ್ಲವೆಂದು ಹಿಂಬರಹ ನೀಡಲಾಗಿದೆ. |
| 4. | ಸಕಲೇಶಪುರ | ಒಟ್ಟು 231 ಅರ್ಜಿಗಳು ಬಾಕಿಯಿದ್ದು, ಈ ಪೈಕಿ 60 ಪ್ರಕರಣಗಳಲ್ಲಿ ಮೋಜಣಿ ನಕ್ಷೆ ತಯಾರಿಸಿದ್ದು, ಅರಣ್ಯ ಇಲಾಖೆಯ ಅಭಿಪ್ರಾಯಕ್ಕೆ ಪತ್ರ ಬರೆಯಲಾಗಿದೆ.<br>ಇನ್ನುಳಿದ 171 ಪ್ರಕರಣಗಳಲ್ಲಿ ಈ ತಾಲ್ಲೂಕಿನಲ್ಲಿ ಅರಣ್ಯಕ್ಕೆ ಕಾಯ್ದಿರಿಸಿರುವ ಜಮೀನು, ಹೇಮಾವತಿ ಜಲಾಶಯ ಯೋಜನೆ ಜಮೀನು ಮತ್ತು ಮಾಜಿ ಸೈನಿಕರ ಮೀಸಲಾತಿ, ಆನೆ ಕಾರಿಡಾರ್ ಗೆ ಮೀಸಲಿಸಿರುವುದರಿಂದ ಮಂಜೂರಾತಿಗೆ ಗೊಂದಲವಾಗಿದ್ದು, ಒತ್ತುವರಿದಾರರು ಕೂಡ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದರಿಂದ ಹಾಗೂ ಅರಣ್ಯ ಇಲಾಖೆಯ ಅಭಿಪ್ರಾಯ ಸ್ವೀಕೃತವಾಗದಿರುವುದರಿಂದ ವಿಳಂಬವಾಗುತ್ತಿದೆ. |
| 5. | ಹಾಸನ | ಒಟ್ಟು 201 ಅರ್ಜಿಗಳು ಬಾಕಿಯಿದ್ದು, 06 ಪ್ರಕರಣಗಳಿಗೆ ಜಮೀನು ಮಂಜೂರಾತಿಗೆ ಪ್ರಸ್ತಾವನೆ ಸಿದ್ದಪಡಿಸಲಾಗಿದೆ. ಉಳಿಕೆ 195 ಪ್ರಕರಣಗಳು ಬಾಕಿಯಿರುತ್ತವೆ. |
| 6. | ಅರಸೀಕೆರೆ | 32 ಅರ್ಜಿಗಳು ಬಾಕಿಯಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ. |
| 7. | ಚನ್ನರಾಯಪಟ್ಟಣ | 83 ಅರ್ಜಿಗಳು ಬಾಕಿಯಿರುತ್ತವೆ. |

ಬಾಕಿಯಿರುವ ಅರ್ಜಿಗಳು ಕಳೆದ 4 ವರ್ಷಗಳಿಂದ ಬಾಕಿಯಿದ್ದು, ಮಂಜೂರು ಮಾಡಲು ಜಮೀನು ಲಭ್ಯವಿಲ್ಲದೇ ಇರುವುದರಿಂದ ಬಾಕಿಯಿರುತ್ತವೆ. ಇಂತಹ ಪ್ರಕರಣಗಳಲ್ಲಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಲು ಕ್ರಮವಹಿಸಲಾಗುತ್ತಿದೆ.

**ಚಾಮರಾಜನಗರ ಜಿಲ್ಲೆ:-** ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 99 ಅರ್ಜಿಗಳು ಮಂಜೂರಾತಿಗೆ ಬಾಕಿಯಿದ್ದು, ಜಿಲ್ಲೆಯು ಶೇಕಡ 49 ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು, ಉಳಿದ ಸರ್ಕಾರಿ ಜಮೀನುಗಳಲ್ಲಿ ಜಮೀನು ಮಂಜೂರಾತಿ ಕೋರಿ ನಮೂನೆ-50, 53 ಮತ್ತು 57 ರಲ್ಲಿ ಸ್ವಾಧೀನದಾರರು ಅರ್ಜಿಗಳನ್ನು ಸಲ್ಲಿಸಿದ್ದು, ಸಮಿತಿಯಲ್ಲಿ ಇತ್ಯರ್ಥಪಡಿಸಿದ ನಂತರ ಹಾಗೂ ಭೂ ಲಭ್ಯತಾ ಪಟ್ಟಿಯನ್ನು ಪರಿಶೀಲಿಸಿಕೊಂಡು ಕ್ರಮವಹಿಸಲಾಗುವುದು.